**ದಿ: 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ.ಎಸ್. ವಕೀಲರಿಂದ: -**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯಗಳು ಬರೆದಿದ್ದಾರೆಂದು ನನಗೆ ಗೊತ್ತಿದೆ. ನನ್ನ ತಂದೆಯ ಹೆಸರು ಯಲ್ಲಪ್ಪ ನನ್ನ ತಾಯಿ ಹೆಸರು ಬಸ್ಸಮ್ಮ ನನ್ನ ತಂದೆ ತಾಯಿ ತೀರಿಕೊಂಡಿರುತ್ತಾರೆ. ನಿಮ್ಮ ತಂದೆ ತಾಯಿಗೆ ಇಬ್ಬರು ಮಕ್ಕಳಿರುತ್ತಾರೆ ಅವರು ನೀವು ಮತ್ತು ಶಿವಮ್ಮ ಎಂದರೆ ಸಾಕ್ಷಿಯು ನನ್ನ ತಂದೆಗೆ ನಾನೊಬ್ಬನೇ ಗಂಡು ಮಗ ಹೆಣ್ಣು ಮಕ್ಕಳಿರುವುದಿಲ್ಲ ಎನ್ನುತ್ತಾರೆ. ನಿಮಗೆ ಶಿವಮ್ಮ ಎನ್ನುವ ಅಕ್ಕ ಜೀವಂತವಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ತಂದೆಗೆ 03 ಜನ ಸಹೋದರರು ಇರುತ್ತಾರೆ. ಅವರ ಹೆಸರು ಮಲ್ಲಪ್ಪ, ದುರಗಪ್ಪ ಮತ್ತು ರಂಗಪ್ಪ ಅಂತಾ ಇರುತ್ತದೆ, ಅವರಿಗೆ ಸಹೋದರಿಯರು ಇರುವುದಿಲ್ಲ. ನಿಮ್ಮ ತಂದೆಗೆ ಶಿವಮ್ಮ ಎನ್ನುವ ತಂಗಿ ಇರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ತಂದೆಗೆ ಶಿವಮ್ಮ ಎನ್ನುವ ತಂಗಿ ಇದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಮಲ್ಲಪ್ಪ ತೀರಿಕೊಂಡಿರುತ್ತಾರೆ ನನ್ನ ದೊಡ್ಡಮ್ಮ ನಿಂಗಮ್ಮ ತೀರಿಕೊಂಡಿರುತ್ತಾರೆ. ಮಲ್ಲಪ್ಪರವರಿಗೆ ಇಬ್ಬರ ಮಕ್ಕಳು ಇರುತ್ತಾರೆ ಅವರ ಹೆಸರು ದುರಗಮ್ಮ ಮತ್ತು ಮಾನಪ್ಪ ಅಂತಾ ಇರುತ್ತಾರೆ. ಮಲ್ಲಪ್ಪ ಇವರಿಗೆ ನಾಲ್ಕು ಜನ ಮಕ್ಕಳಿರುತ್ತಾರೆ ಅವರ ಹೆಸರು ರಂಗಮ್ಮ, ದುರಗಮ್ಮ, ಹಾಜಮ್ಮ ಮತ್ತು ಮಾನಪ್ಪ ಎಂದರೆ ಸಾಕ್ಷಿಯು ಇಲ್ಲ ಇಬ್ಬರು ಮಕ್ಕಳಿದ್ದಾರೆ ಎನ್ನುತ್ತಾರೆ. ಮಲ್ಲಪ್ಪನ ಮಗಳು ರಂಗಮ್ಮ ಇನ್ನೂ ಜೀವಂತವಾಗಿದ್ದಾಳೆಂದರೆ ಸರಿ. ಮಲ್ಲಪ್ಪನ ಮಗಳು ಹಾಜಮ್ಮ ತೀರಿಕೊಂಡಿದ್ದಾಳೆಂದರೆ ಸರಿ. ದುರಗಮ್ಮ ಇವಳು ತೀರಿಕೊಂಡಿರುತ್ತಾಳೆ. ದುರಗಮ್ಮಳಿಗೆ ಮಹಾಲಕ್ಷ್ಮೀ ಎನ್ನುವ ಮಗಳು ಬಿಟ್ಟು ಬೇರೆ ಯಾರು ಇರುವುದಿಲ್ಲ. ದುರಗಮ್ಮಳಿಗೆ 03 ಜನ ಮಕ್ಕಳು, ಸಾಬಮ್ಮ, ಮಹಾಲಕ್ಷ್ಮೀ, ಮಹಾದೇವಮ್ಮ ಎಂದರೆ ಸಾಕ್ಷಿಯು ಇಲ್ಲಾ ಒಬ್ಬಾಕೆ ಮಗಳು ಇರುತ್ತಾಳ ಎನ್ನುತ್ತಾರೆ. ನಿಮಗೆ ಈ ವಿಷಯ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಮಲ್ಲಪ್ಪನ ಮಗ ಮಾನಪ್ಪ ಇವರು ತೀರಿಕೊಂಡು 2-3 ವರ್ಷಕ್ಕೂ ಹೆಚ್ಚಾಗಿರುತ್ತದೆ. ಮಾನಪ್ಪನಿಗೆ ಮಾನಮ್ಮ ಎನ್ನುವ ಹೆಂಡತಿ ಇದ್ದು ಅವರಿಗೆ ಇಬ್ಬರು ಗಂಡು ಮಕ್ಕಳಿರುತ್ತಾರೆ ಅವರ ಹೆಸರು ದುರಗಪ್ಪ ಮತ್ತು ರಾಜಪ್ಪ ಅಂತಾ ಇರುತ್ತದೆ ಅವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ನೀವು ಹೇಳಿದಂತೆ ಮಾನಪ್ಪನ ಮಗನ ಹೆಸರು ದುರಗಪ್ಪ ಅಂತಾ ಇರುವುದಿಲ್ಲ ಅವರ ಹೆಸರು ದೀಪಕಕುಮಾರ ಅಂತಾ ಇರುತ್ತದೆ ಎಂದರೆ ಸಾಕ್ಷಿಯು ದುರಗಪ್ಪ ಎಂದು ಕರೆಯುತ್ತಾರೆ ಎನ್ನುತ್ತಾರೆ. ನೀವು ಹೇಳಿದಂತೆ ಮಾನಪ್ಪನ ಇನ್ನೊಬ್ಬ ಮಗನ ಹೆಸರು ರಾಜಪ್ಪ ಅಂತಾ ಇರುವುದಿಲ್ಲ ಅವರ ಹೆಸರು ರಾಜೇಶ ಅಂತಾ ಇರುತ್ತದೆ ಎಂದರೆ ಸಾಕ್ಷಿಯು ರಾಜಪ್ಪ ಎಂದು ಕರೆಯುತ್ತಾರೆ ಎನ್ನುತ್ತಾರೆ. ಮಾನಪ್ಪನಿಗೆ ಇಬ್ಬರು ಗಂಡು ಮಕ್ಕಳು 04 ಜನ ಹೆಣ್ಣು ಮಕ್ಕಳಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಮಾನಪ್ಪನ 04 ಜನ ಹೆಣ್ಣು ಮಕ್ಕಳ ಹೆಸರು ದುರಗಮ್ಮ, ಸುಜಾತಾ, ರಂಗಮ್ಮ ಮತ್ತು ಯಶೋಧಾ ಎಂದರೆ ಸರಿಯಲ್ಲ. ಅವರೆಲ್ಲರೂ ಇನ್ನೂ ಜೀವಂತವಾಗಿದ್ದಾರೆ ಎಂದರೆ ಸರಿಯಲ್ಲ. ಮಾನಪ್ಪನಿಗೆ 04 ಜನ ಹೆಣ್ಣು ಮಕ್ಕಳು ಜೀವಂತವಾಗಿರುವ ವಿಷಯ ನಿಮಗೆ ಗೊತ್ತಿದ್ದರೂ ಅದನ್ನು ಮುಚ್ಚಿಟ್ಟು ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ದುರಗಪ್ಪ ತೀರಿಕೊಂಡಿರುತ್ತಾರೆ ಅವರ ಹೆಂಡತಿ ಹೆಸರು ಮಲ್ಲಮ್ಮ ಅಂತಾ ಇರುತ್ತದೆ. ನನ್ನ ಚಿಕ್ಕಪ್ಪ ದುರಗಪ್ಪನಿಗೆ ಮಕ್ಕಳು ಇರುವುದಿಲ್ಲ.

3. ದಾವೆಯನ್ನು ಸರ್ವೆ ನಂಬರ್ 110, ವಿಸ್ತೀರ್ಣ 03 ಎಕರೆ 10 ಗುಂಟೆ ಮೇಲೆ ಸಲ್ಲಿಸಿರುತ್ತೇನೆ. ದಾವೆಯಲ್ಲಿ ಸರ್ವೆ ನಂಬರ್ 110 ಜಮೀನನ್ನು ಬಿಟ್ಟು ಬೇರೆ ಸರ್ವೆ ನಂಬರ್ ಬರೆಸಿರುವುದಿಲ್ಲ. ವಾದಾ ಪತ್ರದ ಪ್ಯಾರಾ ನಂಬರ್ 5 ಕರಡಿಗುಡ್ಡ ಸೀಮಾದ ಸರ್ವೆ ನಂಬರ್ 111, ವಿಸ್ತೀರ್ಣ 04 ಎಕರೆ 10 ಗುಂಟೆ ಜಮೀನು ಅಂತಾ ಬರೆಸಿದ್ದೀರಾ ಎಂದರೆ ಸಾಕ್ಷಿಯು ಅದು ನಮಗೆ ಸಂಬಂಧ ಇಲ್ಲ ಎನ್ನುತ್ತಾರೆ. ಸರ್ವೆ ನಂಬರ್ 110 ಮತ್ತು 111 ಜಂಟಿ ಮಾಲೀಕರು ಮತ್ತು ಕಬ್ಜಾದಾರರು ಆಗಿರುತ್ತೇವೆ ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಮಹಾಲಕ್ಷ್ಮೀ ಹೆಸರಿನಲ್ಲಿದೆ ಎನ್ನುತ್ತಾರೆ. ಮಹಾಲಕ್ಷ್ಮೀ ರವರ ಹೆಸರಿನಲ್ಲಿರುವ ಸರ್ವೆ ನಂಬರ್ 111 ನ್ನು ಈ ದಾವೆಯಲ್ಲಿ

ಭಾಗ ಆಗಬೇಕೆಂದು ಸೇರಿಸಿದ್ದೀರಾ ಎಂದರೆ ಸಾಕ್ಷಿಯು ಸೇರಿಸಿದ್ದೇನೆ ಎನ್ನುತ್ತಾರೆ. ಸರ್ವೆ ನಂಬರ್ 111 ನ್ನು ವಾದ ಪತ್ರದ ಶೆಡ್ಯೂಲ್ ನಲ್ಲಿ ಸೇರಿಸಿರುವುದಿಲ್ಲ ಎಂದರೆ ಅದು ನಮಗೆ ಸಂಬಂಧ ಇಲ್ಲ ನನ್ನ ತಂದೆ ನಮ್ಮ ದೊಡ್ಡಪ್ಪನಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ್ 111 ನ್ನು ಕೊಟ್ಟಿರುವ ವಿಷಯವನ್ನು ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎನ್ನುತ್ತಾರೆ. ನೀವು ಮೇಲೆ ಹೇಳಿದ ವಿಷಯವನ್ನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ನೀವು ಸುಳ್ಳು ಹೆಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ಜಾಲಹಳ್ಳಿ ಗ್ರಾಮದ ವಾರ್ಡ್ ನಂಬರ್ 4 ರಲ್ಲಿರುವ ಪಂಚಾಯಿತಿ ನಂಬರ್ 126, ವಿಸ್ತೀರ್ಣ 40X45 ಮನೆ ನಿಮ್ಮ ಹಿರಿಯರ ಆಸ್ತಿಯಾಗಿರುತ್ತದೆಂದರೆ ಸರಿ. ಈ ಮನೆ ಮೊದಲು ನಿಮ್ಮ ಚಿಕ್ಕಪ್ಪ ದುರಗಪ್ಪನ ಹೆಸರಿನಲ್ಲಿತ್ತು ಎಂದರೆ ಸರಿ. ದುರಗಪ್ಪ ತೀರಿಕೊಂಡ ಮೇಲೆ ನಿಮ್ಮ ಹೆಸರಿನಲ್ಲಿ ಮನೆಯನ್ನು ಮಾಡಿಸಿಕೊಂಡಿದ್ದೀರಿ ಎಂದರೆ ಸರಿ. ಜಾಲಹಳ್ಳಿ ಗ್ರಾಮದ ಪಂಚಾಯಿತಿ ನಂಬರ್ 126 ರ ಮನೆ ನಿಮ್ಮ ಹಿರಿಯರ ಆಸ್ತಿ ಅಂತಾ ವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ಮೇಲೆ ಹೇಳಿದ ಆಸ್ತಿಯನ್ನು ವಾದ ಪತ್ರದಲ್ಲಿ ಸೇರಿಸದೇ ಮುಚ್ಚಿಟ್ಟಿದ್ದೀರಾ ಎಂದರೆ ಸರಿಯಲ್ಲ. ದಾವಾ ಹೊಲ ಸರ್ವೆ ನಂಬರ್ 110, ವಿಸ್ತೀರ್ಣ 03 ಎಕರೆ 10 ಗುಂಟೆ ಮೊದಲು ನನ್ನ ದೊಡ್ಡಪ್ಪ ಮಲ್ಲಪ್ಪನ ಹೆಸರಿನಲ್ಲಿತ್ತು. ಈ ಹೊಲವು ಮಲ್ಲಪ್ಪರವರಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಮಲ್ಲಪ್ಪ ಇವರು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಮಲ್ಲಪ್ಪ ಈ ಹೊಲವನ್ನು ಯಾರಿಂದ ಖರೀದಿ ಮಾಡಿದ್ದಾರೆ ಮತ್ತು ಖರೀದಿ ಮಾಡಿದ ದಾಖಲಾತಿಯ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ನಾನು ಹಾಜರು ಮಾಡಿಲ್ಲ. ದಾವಾ ಹೊಲ ಮಲ್ಲಪ್ಪ ಇವರು ಸ್ವಂತ ಖರೀದಿ ಮಾಡಿದ ಆಸ್ತಿಯಾಗಿರುತ್ತದೆ ಎಂದರೆ ಅಲ್ಲ ಎನ್ನುತ್ತಾರೆ. ನಿಮ್ಮ ವಾದ ಪತ್ರದಲ್ಲಿ ದಾವಾ ಹೊಲ ಮಲ್ಲಪ್ಪನ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ಸುಳ್ಳು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಹೊಲದಲ್ಲಿ ಹೇಗಾದರೂ ಮಾಡಿ ಭಾಗ ಪಡೆಯಬೇಕೆಂದು ಸುಳ್ಳು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಹೊಲ ಮಲ್ಲಪ್ಪ ಸ್ವಂತ ಖರೀದಿ ಮಾಡಿದ ಆಸ್ತಿಯಾಗಿರುವುದರಿಂದ ಅದರಲ್ಲಿ ನಿಮಗೆ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ.

5. ಸರ್ವೆ ನಂಬರ್ 110 ಇದರ ಒಟ್ಟು ವಿಸ್ತೀರ್ಣ 04 ಎಕರೆ 10 ಗುಂಟೆ ಇದ್ದು ಅದರಲ್ಲಿ ಕೆನಾಲ್‌ಗೆ ಜಮೀನು ಹೋಗಿರುತ್ತದೆ ಉಳಿದಿದ್ದು 03 ಎಕರೆ 10 ಗುಂಟೆ ಜಮೀನು ಇರುತ್ತದೆ. ವಾದ ಪತ್ರದಲ್ಲಿ ಸರ್ವೆ ನಂಬರ್ 110, 04 ಎಕರೆ 02 ಗುಂಟೆ ನಿಮ್ಮ ಚಿಕ್ಕಪ್ಪ ದುರಗಪ್ಪನ ಹೆಸರಿನಲ್ಲಿರುವ ಜಮೀನನ್ನು ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ ಸಾಕ್ಷಿ ಮುಂದುವರಿದು ಮಲ್ಲಮ್ಮನ ಹೆಸರಿಗೆ ಆಗಿರುತ್ತದೆ ಎನ್ನುತ್ತಾರೆ. 04 ಎಕರೆ 02 ಗುಂಟೆ ದುರಗಪ್ಪನ ಹೆಸರಿನಲ್ಲಿರುವ ಜಮೀನಿನಲ್ಲಿ ಭಾಗ ಬರಬೇಕೆಂದು ಸೇರಿಸಿದ್ದೇನೆ. ಮೇಲೆ ಹೇಳಿದ ಜಮೀನಿನಲ್ಲಿ ಭಾಗ ಬರಬೇಕೆಂದು ವಾದ ಪತ್ರದಲ್ಲಿ ಸೇರಿಸಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮನೆಯ ಪಂಚಾಯಿತಿ ನಂಬರ್ 143, 3 ನೇ ವಾರ್ಡ್ ನಲ್ಲಿ ಬರುತ್ತದೆ. ಇನ್ನೊಂದು ಜಾಗ ಮಲ್ಲಪ್ಪನ ಮನೆ ಮುಂದೆ ಉಳಿದಿರುತ್ತದೆ ಅದನ್ನು ತೋರಿಸಿದ್ದೇನೆ. ಮನೆ ಮತ್ತು ಜಾಗ ಈಗ ನನ್ನ ಚಿಕ್ಕಪ್ಪ ರಂಗಪ್ಪನ ಹೆಸರಿನಲ್ಲಿರುತ್ತವೆ. ದಾವಾ ಮನೆ ಮತ್ತು ಜಾಗ ಇವು ರಂಗಪ್ಪನ ಹೆಸರಿನಲ್ಲಿವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎನ್ನುತ್ತಾರೆ. ಮೇಲೆ ತೋರಿಸಿದ ಮನೆ ಮತ್ತು ಜಾಗ ರಂಗಪ್ಪನ ಹೆಸರಿನಲ್ಲಿವೆ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಮನೆ ಮತ್ತು ಜಾಗ 1ನೇ ಮಾನಮ್ಮ ಗಂಡ ಮಾನಪ್ಪ ಇವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. 143/1 ಜಾಗ ಇದು ಅಜ್ಜಮ್ಮ ಗಂಡ ಮಲ್ಲಪ್ಪ ಚಪ್ಪಳಕಿ ಇವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳು ನಿಮ್ಮ ಕುಟುಂಬದ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳಲ್ಲಿ ನಿಮಗೆ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಹೊಲ ಮತ್ತು ಮನೆ, ಜಾಗ ನಿಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುವುದಿಲ್ಲ ಅವುಗಳಲ್ಲಿ ನಿಮಗೆ ಭಾಗ ಬರಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕುಟುಂಬಕ್ಕೆ ಸೇರಿದ ಹಿರಿಯರ ಆಸ್ತಿ ಪಂಚಾಯಿತಿ ನಂಬರ್ 126ರ ಮನೆಯಾಗಿರುತ್ತದೆ ಅದು ನಿಮ್ಮ ಚಿಕ್ಕಪ್ಪ ದುರಗಪ್ಪನಿಂದ ನಿಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೀರಿ ಅದರಲ್ಲಿ ಭಾಗ ಆಗಬೇಕೆಂದರೆ ಸರಿಯಲ್ಲ. ಪಿತ್ರಾರ್ಜಿತ ಮನೆಯನ್ನು ನಿಮ್ಮ ಹೆಸರಿಗೆ

ಮಾಡಿಸಿಕೊಂಡು ಅದನ್ನು ಮುಚ್ಚಿಟ್ಟು ನಿಮಗೆ ಸಂಬಂಧಪಡದೇ ಇರುವ ದಾವಾ ಹೊಲ, ಮನೆ, ಜಾಗದ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ವಾದ ಪತ್ರದಲ್ಲಿ ಉಳಿದ ಕುಟುಂಬದ ಸದಸ್ಯರ ಹೆಸರುಗಳನ್ನು ತೋರಿಸದೇ ಸುಳ್ಳು ವಂಶಾವಳಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ